

ಸಾಮರ್ಥ್ಯ ಇದ್ದವರಿಗೆ ಇಡೀ ವಿಶ್ವವೇ ನೌಕರಿಯ ಆಡುಂಬೊಲ

## ಭಾರೀ ನೇಮಕಾತಿಯೇ ಸಮಸ್ಯೆಯ ಮೂಲ

ಕೋವಿಡ್ ಆರಂಭದಿಂದ ಮೊನ್ನೆ ಮೊನ್ನೆ ತನಕ ಕಂಪನಿಗಳು ಹೆಚ್ಚಿನ ನೇಮಕಾತಿಗಳನ್ನು ಮಾಡಿಕೊಂಡಿದ್ದವು. ಈಗ ಆದಾಯ ಕುಸಿತದಿಂದ ಸಿಬ್ಬಂದಿ ಕಡಿತಕ್ಕೆ ಮುಂದಾಗಿವೆ. ಫೇಸ್‌ಬುಕ್ ಒಡೆತನದ ಮೆಟಾದಲ್ಲಿ ಉದ್ಯೋಗಿಗಳ ಸಂಖ್ಯೆಯನ್ನು ಶೇ. 80ರಷ್ಟು ಹೆಚ್ಚಿಸಲಾಗಿತ್ತು. ಅಲ್ಲಿ ಉದ್ಯೋಗಿಗಳ ಸಂಖ್ಯೆ 87,000 ಮುಟ್ಟಿತ್ತು. ಗೂಗಲ್ ಮಾತೃ ಸಂಸ್ಥೆ ಆಲ್ಫಬೆಟ್‌ನಲ್ಲಿ ಸಿಬ್ಬಂದಿ ಸಂಖ್ಯೆ ಶೇ. 57ರಷ್ಟು ಹೆಚ್ಚಿಸಿದ್ದು, 68,000 ನೌಕರರಿದ್ದರು. ಇನ್ನು ಟ್ವಿಟರ್‌ನಲ್ಲಿ 2020ರಿಂದ ಈಚೆಗೆ ಭಾರೀ ನೇಮಕಗಳಾಗಿದ್ದು ಉದ್ಯೋಗಿಗಳ ಸಂಖ್ಯೆ ಡಬಲ್ ಅಂದರೆ, 8,992ಕ್ಕೆ ಮುಟ್ಟಿತ್ತು.

### 1. ಸಾಮರ್ಥ್ಯವೇ (ಸ್ಕಿಲ್) ನಿರ್ಣಾಯಕ

ಕೇವಲ ಪದವಿ ಸರ್ಟಿಫಿಕೇಟ್‌ಗಳಿಂದ ನಮಗೆ ಯಾರೂ ಕೆಲಸ ಕೊಡುವುದಿಲ್ಲ. ಡಿಗ್ರಿಗಿಂತಲೂ ಮಾರುಕಟ್ಟೆ ಬಯಸುವಂಥ ಸ್ಕಿಲ್‌ಗಳು ನಮ್ಮಲ್ಲಿರಬೇಕು. ಈಗಾಗಲೇ ಇರುವ ಸ್ಕಿಲ್ ಅನ್ನು ವೃದ್ಧಿಸಿಕೊಳ್ಳುವುದು ಅಥವಾ ಅಗತ್ಯವಾದ ಸ್ಕಿಲ್ ಅನ್ನು ಕಲಿಯುವುದು ಈಗ ನಮ್ಮ ಮುಂದಿನ ಆದ್ಯತೆಯಾಗಬೇಕು. ಸ್ಕಿಲ್ ವೃದ್ಧಿಗೆ ಪೂರಕವಾದ ವ್ಯವಸ್ಥೆ ಆನ್‌ಲೈನ್‌ನಲ್ಲಿಯೇ ಸಾಕಷ್ಟಿದೆ. ನಮ್ಮ ರೆಸ್ಯೂಮ್‌ನಲ್ಲಿ ಉದ್ಯೋಗ ಮಾರುಕಟ್ಟೆ ಬಯಸುವ ಸ್ಕಿಲ್‌ಗಳು ಸೇರಿಕೊಂಡರೆ, ಸುಲಭವಾಗಿ ಕರಿಯರ್‌ನ ಹೊಸ ಇನ್ನಿಂಗ್ಸ್ ಅದ್ಭುತವಾಗಿ ಆರಂಭಗೊಳ್ಳುತ್ತದೆ.

ಅಪ್‌ಡೇಟ್ ಆದ ನಿಮ್ಮ ರೆಸ್ಯೂಮ್ ಅನ್ನು ಜಾಬ್ ಪೋರ್ಟಲ್‌ಗಳಲ್ಲಿ ಇಟ್ಟರೆ, 'ಲಿಂಕ್ಡ್ ಇನ್'ನಲ್ಲಿ (in.linkedin.com) ಪ್ರೊಫೈಲ್ ಅಪ್‌ಡೇಟ್ ಮಾಡಿದರೆ, ಉದ್ಯೋಗ ಬೇಟೆ ಸುಲಭವಾಗುತ್ತದೆ. ಸ್ಕಿಲ್‌ಗಳಿಲ್ಲದೇ ಹೋದರೆ, ಕಡಿಮೆ ಸಂಬಳದ ಕೆಲಸಗಳಿಗೆ ಸೀಮಿತವಾಗಬೇಕಾಗುತ್ತದೆ. ನಮ್ಮ ಕರಿಯರ್‌ಗೆ ಯಾವುದು ತಡೆಯೊಡ್ಡುತ್ತಿದೆ ಎನ್ನುವುದನ್ನು ಮೊದಲು ಗುರುತಿಸಬೇಕು. ಅಂಥದ್ದೊಂದು ಸ್ಕಿಲ್ ಅನ್ನು ದಕ್ಕಿಸಿಕೊಳ್ಳಲು ಆರು ತಿಂಗಳು ಬೇಕಾ? ಒಂದು ವರ್ಷ ಬೇಕಾಗುತ್ತದೆಯಾ ಎನ್ನುವ ಚಿಂತನೆ ಮಾಡಬೇಕು. ನಿಯಮಿತ ಪ್ರಯತ್ನಗಳಿಂದ ಆ ಕೊರತೆ ನೀಗಿಸಿಕೊಳ್ಳುವುದು ಸಾಧ್ಯವಾಗುತ್ತದೆ.


ಸ್ಕಿಲ್ ಮತ್ತು ಅನುಭವ ಗಳಿಕೆಗೆ ಪೂರಕವಾಗಿ ಕಡಿಮೆ ಸಂಬಳದ ಕೆಲಸವಾದರೂ ಸರಿಯೇ ಮೊದಲು ಸೇರಿಕೊಳ್ಳಿ.

### 2. ಸುತ್ತಲೂ ಏನಾಗುತ್ತಿದೆ ಗಮನಿಸಿ

ನೋಡನೋಡುತ್ತಲೇ ಗೆಳೆಯನೊಬ್ಬ ವೃತ್ತಿಯಲ್ಲಿ ಉನ್ನತ ಮಟ್ಟಕ್ಕೆ ತಲುಪುತ್ತಾನೆ. ನಮ್ಮೊಂದಿಗೆ ವೃತ್ತಿ ಆರಂಭಿಸಿದ ಅವನ ಜಿಗಿತಕ್ಕೆ ಕಾರಣವಾದ ಅಂಶ ಹಾಗೂ ನಾವು ಇರುವಲ್ಲಿಯೇ ಇರುವುದು ಏಕೆ ಎನ್ನುವ ವಿಷಯದಲ್ಲಿ ಚಿಂತನ–ಮಂಥನ ನಡೆಸಬೇಕು. ಯಾವ ಸ್ಕಿಲ್‌ಗಳು ಅವನಿಗೆ ಪೂರಕವಾಯಿತು ಎನ್ನುವುದು ನಮಗೆ ಅರ್ಥವಾದರೆ, ಅವುಗಳನ್ನು ನಮಗೂ ಬೆಳೆಸಿಕೊಳ್ಳಲು ಸಾಧ್ಯವಾದರೆ, ಹೆಚ್ಚಿನ ಅವಕಾಶಗಳು ನಮಗೂ ಸಿಗುತ್ತವೆ. ವೃತ್ತಿಯ ಬೆಳವಣಿಗೆಯನ್ನು ಖಾತರಿಪಡಿಸುತ್ತವೆ.

ನಾಯಕತ್ವ ಗುಣ, ಸಮಯ ನಿರ್ವಹಣೆ, ಟೀಮ್ ಆಗಿ ಕೆಲಸ ಮಾಡುವ ಸ್ವಭಾವ, ಸಂವಹನದ ಮಟ್ಟ – ಇವೆಲ್ಲವೂ ನಮ್ಮ ವೃತ್ತಿಪರ ಜೀವನದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಕೆಲವರು ಬದ್ಧತೆಯಿಂದ ಕೆಲಸ ಮಾಡುತ್ತಾರೆ. ಆದರೆ, ತಮ್ಮ ಕೆಲಸವನ್ನು ಮಾರ್ಕೆಟಿಂಗ್ ಮಾಡುವುದು ಗೊತ್ತಿರುವುದಿಲ್ಲ. ಅವರ ಕೆಟ್ಟ ಸಂವಹನ, ಕೆಟ್ಟ ಬಾಡಿ ಲಾಂಗ್ವೇಜ್‌ಗಳು ವೃತ್ತಿಯಲ್ಲಿ ಹಿನ್ನಡೆಗೆ ಕಾರಣವಾಗುತ್ತವೆ. ನಮ್ಮ ಬಗ್ಗೆ ಇತರರು ಏನನ್ನು ಹೇಳುತ್ತಾರೆ, ಯಾವ ಪ್ಲಸ್ ಮತ್ತು ಮೈನಸ್ ಪಾಯಿಂಟ್‌ಗಳನ್ನು ನಮ್ಮಲ್ಲಿ ಗುರುತಿಸುತ್ತಾರೆ ಎನ್ನುವುದನ್ನು ಕೇಳಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಕೊರತೆಗಳನ್ನು ತುಂಬಿಕೊಂಡರೆ ವೃತ್ತಿಜೀವನದ ನಾಳೆಗಳು ಸುಂದರವಾಗುತ್ತವೆ.

ಉದ್ಯೋಗಿಗಿಂತಲೂ ಅವನ ಕೆಲಸವೇ ಮಾತಾಡಬೇಕು. ಅದಷ್ಟೇ ಪರಿಣಾಮಕಾರಿ ಎನ್ನುವ ಪುರಾತನ ನಂಬಿಕೆಯೊಂದಿದೆ. ಆದರೆ, ಚೆನ್ನಾಗಿ ಕೆಲಸ ಮಾಡಿದರೆ, ವೃತ್ತಿಯಲ್ಲಿ ಬೆಳವಣಿಗೆಯಾಗಬಹುದು ಎನ್ನುವುದು ಪೂರ್ಣ ಸತ್ಯವಲ್ಲ. ಮಾಡಿದ ಕೆಲಸದ ಮಹತ್ವವನ್ನು ಮೇಲಧಿಕಾರಿಗಳು ಹಾಗೂ ಸಂಸ್ಥೆಯ




ವೃತ್ತಿಬದುಕಿನ ಏರಿಳಿತಗಳಿಗೆ ವ್ಯವಸ್ಥಿತ ಯೋಜನೆಯೇ ಮದ್ದು